# ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದಂ.ನ್ಯಾ.ದಂ.ರವರ ನ್ಯಾಯಾಲಯ, ತಿಪಟೂರು.

## ಸಿ.ಸಿ.ನಂ. 202/2018

**ಪಿರ್ಯಾದುದಾರರು** : ಎಂ. ನಾಗರಾಜು.

**ವಿರುದ್ಧ**

**ಆರೋಪಿತರು** :

1. ಶ್ರೀ ಮುಕ್ಕಣ್ಣೇಶ್ವರ ಕೊಕೊನಟ್ ಇಂಡಸ್ಟ್ರೀಸ್, ಭೈರನಾಯಕನಹಳ್ಳಿ, ತಿಪಟೂರು ಇದರ ಮಾಲೀಕರು ಶರಣಪ್ಪ. ಆರ್.ಸಿ.

2. ಶರಣಪ್ಪ. ಆರ್.ಸಿ., ವಯಸ್ಸು ಸುಮಾರು 50 ವರ್ಷ, ಮಾಲೀಕರು, ಶ್ರೀ ಮುಕ್ಕಣ್ಣೇಶ್ವರ ಕೊಕೊನಟ್ ಇಂಡಸ್ಟ್ರೀಸ್, ಭೈರನಾಯಕನಹಳ್ಳಿ, ತಿಪಟೂರು. ಕೇರ್ ಆಫ್ ಸುಧಾ, ನರ್ಸ್, Government Hospital Quarters, Tiptur Town.

## <u>ಆರೋಪಣೆ</u>

ಶ್ರೀ ಸತೀಶ್. ಎಸ್.ಟಿ., ಬಿ.ಕಾಂ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದಂ.ನ್ಯಾ.ದಂ., ತಿಪಟೂರು ಆದ ನಾನು ಮೇಲ್ಕಂಡ ಆರೋಪಿಯಾದ ನಿಮ್ಮ ವಿರುದ್ಧ ಮಾಡುತ್ತಿರುವ ಆರೋಪಣಾ ಸಾರಾಂಶ ವೇನೆಂದರೆ:

ಮೇಲ್ಕಂಡ ಆರೋಪಿಯಾದ ನೀವು ಪಿರ್ಯಾದಿಯವರಿಂದ **ದಿಃ19.07.2017** ರಂದು **ರೂ.2,00,000/-** ಗಳನ್ನು ಸಾಲವಾಗಿ ಪಡೆದಿದ್ದು, ಸದರಿ ಸಾಲದ ತೀರುವಳಿ ಸಲುವಾಗಿ ಆರೋಪಿಯಾದ ನೀವು ತಿಪಟೂರು ಶಾಖೆಯ **SBM** ಬ್ಯಾಂಕಿನ ದಿಃ **31.08.2017** ರ **ಚೆಕ್ ನಂ. 481722** ನ್ನು **ರೂ.2,00,000/-** ಗಳಿಗೆ ಪಿರ್ಯಾದಿ ಪರವಾಗಿ ವಿತರಿಸಿದ್ದು, ನಂತರ ಪಿರ್ಯಾದಿಯವರು ಸದರಿ ಚೆಕ್ಕನ್ನು ತಿಪಟೂರು ಎಡಿಬಿ ಮಾರನಗೆರೆ ಶಾಖೆಯ **SBI** ಬ್ಯಾಂಕಿಗೆ ನಗದೀಕರಣಕ್ಕಾಗಿ ಸಲ್ಲಿಸಿದಾಗ ಸದರಿ ಬ್ಯಾಂಕಿನವರು **ಚೆಕ್.ದಾತರ ಖಾತೆಯಲ್ಲಿ ಸಾಕಷ್ಟು ಹಣ ಲಭ್ಯವಿಲ್ಲ (Funds Insufficient)** ಎಂದು

ತಿಳಿಸಿ ದಿಃ 04.09.2017 ರಂದು ಹಿಂಬರಹದೊಂದಿಗೆ ಸದರಿ ಚೆಕ್ಕನ್ನು ಪಿರ್ಯಾದಿಗೆ ಹಿಂದಿರುಗಿಸಿದ್ದು, ತದನಂತರ ಪಿರ್ಯಾದುದಾರರು ಅವರ ವಕೀಲರ ಮೂಲಕ ದಿಃ 08.09.2017 ರಂದು ನೊಂದಾಯಿತ ಅಂಚೆ ಮೂಲಕ ಆರೋಪಿಯಾದ ನಿಮಗೆ ಹಣ ತಗಾದೆ ಮಾಡಿ ನೋಟೀಸ್ ಕಳುಹಿಸಿದ್ದು, ಸದರಿ ನೋಟೀಸ್ ದಿಃ 12.09.2017 ರಂದು ನಿಮಗೆ ಜಾರಿಯಾಗಿದ್ದು, ಅದಾದ ನಂತರವೂ ಸಹ ಆರೋಪಿಯಾದ ನೀವು ಪಿರ್ಯಾದಿಗೆ ಸಾಲದ ಹಣವನ್ನು ಮರುಪಾವತಿಸಿರುವುದಿಲ್ಲ ಹಾಗೂ ಆರೋಪಿಯಾದ ನೀವು ಪಿರ್ಯಾದಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ಚೆಕ್ಕನ್ನು ಪಿರ್ಯಾದಿ ಪರವಾಗಿ ವಿತರಿಸಿದ್ದು, ಸದರಿ ನಿಮ್ಮ ಕೃತ್ಯವು **ವ್ಯವಹರಣೀಯ ಲಿಖಿತಗಳ ಅಧಿ ನಿಯಮ ಕಲಂ. 138** ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವಾಗಿರುತ್ತದೆ ಎಂದು ನಿಮ್ಮ ಮೇಲೆ ಆರೋಪಿಸಲಾಗಿದೆ.

**(ಸತೀಶ್. ಎಸ್.ಟಿ.)**
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದಂ.ನ್ಯಾ.ದಂ.,
ತಿಪಟೂರು

**ಆರೋಪಿಯ ಹೇಳಿಕೆ**

ಪ್ರಶ್ನೆ:1) ಇದೀಗ ಓದಿ ಹೇಳಿದ ಆರೋಪಣಾ ಸಾರಾಂಶವು ನಿಮಗೆ ಅರ್ಥವಾಯಿತೇ?

ಉತ್ತರ:-

ಪ್ರಶ್ನೆ:2) ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ?

ಉತ್ತರ:-

(ದಿನಾಂಕ: **05.07.2019** ರಂದು ತೆರೆದ ನ್ಯಾಯಾಲಯದಲ್ಲಿ ಮೇಲಿನ ಆರೋಪಣೆಯನ್ನು ಆರೋಪಿಗೆ ಓದಿ ಹೇಳಿದ್ದು, ಮೇಲಿನ ಪ್ರಶ್ನೆಗಳಿಗೆ ಅವರು ನೀಡಿದ ಉತ್ತರಗಳನ್ನು ಪಡೆದು ಯಥಾವತ್ತಾಗಿ ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು)

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದಂ.ನ್ಯಾ.ದಂ.,
ತಿಪಟೂರು